| ಅಮೃತವಾಣಿ |

ಪರಮಾತ್ಮನು ರಾಮ ಕೃಷ್ಣ ಮೊದಲಾದ ಅವತಾರ ಮಾಡಿ ತನ್ನ ದಿವ್ಯವಾದ ಲೀಲೆಗಳಿಂದ ಪವಿತ್ರ ಮಾಡಿದ ನಮ್ಮ ಭರತಖಂಡದಲ್ಲಿ ಜನಿಸಿ, ಆ ಪರಮಾತ್ಮನ ಭಕ್ತರೇ ಆಗಿ, ಆ ಕಾರಣದಿಂದಲೇ ನಮ್ಮ ಬಂಧುಗಳೆನಿಸಿದ ನಾನಾ ವರ್ಗದ ಹಿಂದುಗಳೇ ನೀವು ಮುಂದೆ ಕಷ್ಟಕ್ಕೆ ಗುರಿ ಆಗಬಾರದು, ಅದಕ್ಕೋಸ್ಕರ ನಿಮಗೆ ನಾಲ್ಕು ಹಿತವಚನಗಳನ್ನು ಹೇಳಲು ನಮ್ಮ ಮನಸ್ಸು ಉತ್ಸಾಹ ಪಡುತ್ತಿದೆ.

ಸಕಲ ಜಗತ್ತನ್ನು ಸೃಷ್ಟಿ ಮಾಡಿದ ದೇವರು ಎಲ್ಲಾ ಪ್ರಾಣಿಗಳು ತನಗೆ ಮಕ್ಕಳೇ ಆದ್ದರಿಂದ ಅವರು ಆ ಲೋಕದಲ್ಲೂ ಪರಲೋಕದಲ್ಲೂ ಸುಖಪಡಲಿ ಎಂಬ ಅಭಿಪ್ರಾಯದಿಂದ ಬುದ್ಧಿ ಉಪಯೋಗಿಸಿ ಕೆಲಸ ಮಾಡಲು ಸಮರ್ಥರಾದ ಮಾನವರಿಗೆ ಈ ಲೋಕದಲ್ಲಿ ಸುಖ ಪಡುವುದಕ್ಕೆ ಮುಖ್ಯ ಕಾರಣವಾದ ಆರೋಗ್ಯವನ್ನು ಉಳಿಸಿಕೊಳ್ಳುವುದಕ್ಕೋಸ್ಕರ ವೈದ್ಯ ಶಾಸ್ತ್ರವನ್ನೂ, ನಾನಾ ಬಗೆಯ ಸುಖ ಪಡುವು ದಕ್ಕೆ ಕಲಾ ಶಾಸ್ತ್ರಗಳನ್ನೂ ಹೇಗೆ ನಿರ್ಮಾಣ ಮಾಡಿದ್ದಾನೋ ಹಾಗೆ ಪರಲೋಕದ ಸುಖಕ್ಕೆ ಮಾರ್ಗಗಳನ್ನು ತಿಳಿಸಿ ಕೊಡುವ ಧರ್ಮಶಾಸ್ತ್ರಾದಿಗಳನ್ನೂ, ಮೋಕ್ಷ (ಶಾಶ್ವತಸುಖ)ಕ್ಕೆ ಮಾರ್ಗ ಪ್ರದರ್ಶಕವಾದ ವೇದಾಂತಶಾಸ್ತ್ರವನ್ನು ನಿರ್ಮಾಣ ಮಾಡಿರುತ್ತಾರೆ.

ಆಸ್ತಿಕರು, ಮಾನವ ಧರ್ಮದ ಮುಖ್ಯ ಕರ್ತವ್ಯ ಮೋಕ್ಷಕ್ಕೆ ಸಾಧನೆ ಮಾಡಿಕೊಳ್ಳುವುದೇ, ಎಂಬು ದಾಗಿಯೂ ಈ ಮಧ್ಯದಲ್ಲಿ ಲೌಕಿಕ ಸುಖಗಳನ್ನು ದೇವರೇ ಅನುಗ್ರಹ ಮಾಡಿಕೊಡುವನೆಂದೂ ಅದಕ್ಕಾಗಿ ಬೇರೆ ಪ್ರಯತ್ನ ಮಾಡಬೇಕಾಗಿಲ್ಲವೆಂದೂ ತಿಳಿದಿದ್ದಾರೆ. ಈ ಮೋಕ್ಷಮಾರ್ಗದಲ್ಲಿ ಸಾಧನೆ ಮಾಡಿಕೊಳ್ಳುವವರಿಗೆ ಅವರವರ ಯೋಗ್ಯತೆಗೆ ಅನುಗುಣವಾದ ಸ್ಥಾನ (ಜಾತಿ) ಕರ್ತವ್ಯ ಕರ್ಮಗಳು, ಮಾನ, ವೇತನ ಅದಕ್ಕೆ ಸದೃಶವಾದ ತನ್ನ ಅನುಗ್ರಹ, ಫಲರೂಪವಾದ ಮೋಕ್ಷ ಇವುಗಳನ್ನು ಅನಾದಿಯಿಂದಲೂ ಏರ್ಪಡಿಸಿಕೊಂಡಿದ್ದರು, ಇದನ್ನು ಹೋಲುವುದೇ ಅತಿ ಸಣ್ಣ ಸರ್ಕಾರದಂತಿರುವ ನಮ್ಮ ನಮ್ಮ ಮನೆಯ ಏರ್ಪಾಡುಗಳು. ದೇವರು ಹೀಗೆ ತಾನೇ ನಿರ್ಮಾಣ ಮಾಡಿದ ಲೋಕಗಳು

ಮತ್ತು ಶಾಸ್ತ್ರಗಳು ಹೊಂದಿಕೊಂಡಿರುವಂತೆಯೇ ಮಾಡಿರುವನೇ ವಿನಹ ಅವುಗಳು ಪರಸ್ಪರ ವಿರೋಧ ಬರುವಂತೆ ಮಾಡುವ ಹುಚ್ಚು ದೊರೆ ಅವನಲ್ಲ. ಈ ಲೋಕ ಪರಲೋಕ ಸುಖವನ್ನು ಕೊಡುವವನು ದೇವರೇ ಆದ್ದರಿಂದ ಅವನ ಅನುಗ್ರಹ ಸಂಪಾದನೆಯಿಂದ ಮೋಕ್ಷಫಲವನ್ನು ಹೊಂದಲು ಬಯಸು ವವರಿಗೆ ಈ ಲೋಕದ ಸುಖಗಳು ಎಲೆ ಕಾಷ್ಠಗಳಂತೆ ವಿಶೇಷ ಪ್ರಯತ್ನವಿಲ್ಲದೆ ದೊರಕುತ್ತವೆ. ಆದ್ದರಿಂದ ಹಿಂದಿನ ರಾಜರುಗಳು ದೇವರ ಆಜ್ಞಾರೂಪವಾದ ವೇದಾದಿಗಳನ್ನು ಓದಿಕೊಂಡು ಅದರಲ್ಲಿ ಹೇಳಿರುವ ಅನಾದಿಯಿಂದ ಬಂದ ನಮ್ಮನ್ನು ದು:ಖಕ್ಕೆ ಗುರಿಯಾಗದಂತೆ ಕಾಪಾಡುವ, ಆ ಕಾರಣ ದಿಂದಲೇ ಪ್ರಸಿದ್ಧವಾದ ಸನಾತನ ಧರ್ಮಕಾರ್ಯ ಕೈಗೊಳ್ಳುತ್ತಾ ತಾವು ಸುಖ ಪಡುವುದಲ್ಲದೇ ಪ್ರಜೆ ಗಳಿಂದಲೂ ಧರ್ಮಕಾರ್ಯ ಮಾದಿಸುತ್ತಾ, ಅವರು ಸುಖ ಪಡುವಂತೆ ಮಾಡಿ, ರಾಜರೆಂಬ ತಮ್ಮ ಹೆಸರನ್ನು ಅನ್ವರ್ಥಕಗೊಳಿಸಿಕೊಳ್ಳುತ್ತಿದ್ದರು. ಅಂತಹ ಧರ್ಮಗಳನ್ನು ಈಗಲೂ ಅನುಷ್ಠಾನ ಮಾಡಲು ಬಯಸುವವರು ಮೊದಲು ತಮ್ಮ ದೇಶ (ಸ್ಥಾನ)ವೊಂದನ್ನು ಭದ್ರಪಡಿಸಿಕೊಳ್ಳಬೇಕು. ನಾನಾ ಜನ ಸೇರಿರಿವ ಛತ್ರದಲ್ಲಿ ಇರುವಾಗ ನಮ್ಮ ನಮ್ಮ ಧರ್ಮವನ್ನಾಚರಿಸುವುದಕ್ಕೆ ಅನುಕೂಲ ದೊರಕಲಾರದಷ್ಟೇ.

ನಾವು ಹಿಂದೆ ಪಾಶ್ಚಾತ್ಯರಿಗೆ ರಾಜ್ಯವನ್ನು ಒಪ್ಪಿಸಿ ಕೊಡುವಾಗಲೂ ನಮ್ಮ ಧರ್ಮದಲ್ಲಿ ಅವರು ಪ್ರವೇಶ ಮಾಡಕೂಡದೆಂಬ ಕರಾರು ಮಾಡಿಸಿಕೊಂಡೇ ರಾಜ್ಯವನ್ನು ಅವರಿಗೆ ಒಪ್ಪಿಸಿದ್ದೆವು. ಆ ಧರ್ಮ ಮಾರ್ಗವನ್ನು ಬಿಟ್ಟ ಯಾರೂ ಸುಖವನ್ನು ಹೊಂದಲಾರರು.

ಆಂಗ್ಲರು ಮ್ಲೇಂಛರು ಮೊದಲಾದವರೆಲ್ಲರೂ ತಮ್ಮ ತಮ್ಮ ಒಂದು ದೇಶವನ್ನು ಭದ್ರಪಡಿಸಿ ಕೊಂಡಿರು ವಾಗ ಹಿಂದುಗಳಾದ ನಮಗೆ ಸೃಷ್ಟಿಕಾಲದಿಂದಲೇ ದೇವರಿಂದ ಕೊಡಲ್ಪಟ್ಟ ಭರತಭೂಮಿಯನ್ನು ಉಳಿಸಿಕೊಳ್ಳಬೇಕಾದದ್ದು ನಮ್ಮ ಕರ್ತವ್ಯವಲ್ಲವೇ? ಹಿಂದೂ ದೇಶ ಅಂದಮಾತ್ರಕ್ಕೆ ನಮ್ಮ ದೇಶದಲ್ಲಿ ಇತರರಿಗೆ ವಾಸಕ್ಕೆ ಅವಕಾಶ ಕೊಡಬಾರದೆಂಬ ಭಾವನೆ ಇಟ್ಟುಕೊಳ್ಳಬಾರದು. ಆಯಾ ದೇಶದ

ಜನರಿಗೆ ದೇವರೇ ಒಂದು ಪ್ರೀತಿ ವಿಶೇಷ ಕೊಟ್ಟಿರುವಾಗ ಅದನ್ನು ಬಿಡಿಸಿಕೊಳ್ಳಲು ಯಾರಿಗೂ ಸಾಧ್ಯವಿಲ್ಲ. ಅದನ್ನು ಅನುಸರಿಸಿಯೇ ನಾವು ಶ್ರೇಯಸ್ಸನ್ನು ಹೊಂದಬೇಕು. ಆದ್ದರಿಂದ ನಮ್ಮ ಹಿಂದೂ ದೇಶದಲ್ಲಿ ಸ್ವಾಭಾವಿಕವಾಗಿ ಪ್ರೇಮವುಳ್ಳ ದೇವರ ಭಕ್ತರನ್ನೇ ಉತ್ತಮ ಸ್ಥಾನಗಳಿಗೆ ಚುನಾಯಿಸಿದರೆ, ದೇಶ ಅಭಿವೃದ್ಧಿಗೊಳ್ಳುವುದು. ನಮ್ಮ ರಾಷ್ಟ್ರ ಜಾತ್ಯಾತೀತ ಎಂಬುದಾಗಿ ಹೇಳುತ್ತಾ ಎಲ್ಲಾ ಜನಾಂಗಕ್ಕೂ ಸಮಾನವಾದ ಅಧಿಕಾರ ಕೊಟ್ಟರೆ, ಅವರುಗಳು ತಮ್ಮ ತಮ್ಮ ಗುಂಪನ್ನು ದಿನದಿನಕ್ಕೆ ವೃದ್ಧಿಗೊಳಿಸಿಕೊಳ್ಳದೇ ಬಿಡಲಾರರು. ಅದರಿಂದ ಸ್ವಲ್ಪ ಕಾಲದಲ್ಲೇ ಅಂತಃಕಲಹಗಳು ಪ್ರಾರಂಭವಾಗುವುದಲ್ಲದೇ ಕೊನೆಯಲ್ಲಿ " **might is right"** ಎಂಬಂತಾಗಿ ದೇಶವು ಅವ್ಯವಸ್ಥೆಗೆ ಗುರಿಯಾಗಿ ಯಾರಿಗೂ ಶಾಂತಿ ದೊರಕಲಾರದು. ಆದ್ದರಿಂದ ಶಾಂತಿ ಬಯಸುವವರು ತಮ್ಮ ತಮ್ಮ ಪ್ರತ್ಯೇಕ ಸ್ಥಾನ (ದೇಶ)ದಲ್ಲಿ ನೆಲಸಿ ತಮ್ಮ ತಮ್ಮ ಧರ್ಮಾಚರಣೆಯನ್ನು ನಡೆಸುವುದೇ ಅವರ ಉನ್ನತ ಸ್ಥಿತಿಗೆ ಕಾರಣವಾಗುತ್ತದೆಂದು ತಿಳಿಯಬೇಕು.

ನಮ್ಮ ಭಾರತದೇಶಕ್ಕೆ ಎಲ್ಲಾ ದೇಶಗಳಿಗಿಂತ ಪ್ರಾಶಸ್ತ್ಯವು. ದೇವರು ಇಲ್ಲಿ ಅವತಾರ ಮಾಡಿರುವುದ ರಿಂದಲೂ, ಇಲ್ಲಿಯ ಜನಾಂಗವು ದೇವರಲ್ಲಿ ಭಕ್ತಿ ಮಾಡುವುದನ್ನೇ ಧ್ಯೇಯವಾಗಿ ಇಟ್ಟುಕೊಂಡು, ಅವನಿಗೆ ಪ್ರೀತಿಕರವಾದ ಸನಾತನ ಧರ್ಮಗಳನ್ನು ಮಾಡುತ್ತಾ ಇರುವುದರಿಂದಲೂ ದೊರಕಿದೆ. ಹೀಗೆ ನಮ್ಮ ಶ್ರೇಯಸ್ಸಿಗೆ ಕಾರಣವಾದ ಸನಾತನ ಧರ್ಮಗಳಿಗೆ ಚ್ಯುತಿ ತರುವುದು ನಮಗೆ ಸರ್ವಥಾ ಯೋಗ್ಯವಾದದ್ದಲ್ಲ. ಎಲ್ಲಾ ಪ್ರಾಣಿವರ್ಗದಲ್ಲೂ ಗಂಡು ಹೆಣ್ಣು ಇರುವಂತೆ, ಎಲ್ಲರಲ್ಲೂ ದೇವರ ಭಕ್ತರು ಮತ್ತು ದೇವರನ್ನು ಅವನ ಧರ್ಮಗಳನ್ನು ತಿರಸ್ಕಾರ ಮಾದುವ ದ್ವೇಷಿಗಳು ಇದ್ದಾರೆ. ಸುಮಾರು ನಮಗೆ ಸ್ವಾತಂತ್ರ್ಯ ಬರುವವರೆಗೂ ಹಿಂದಿನ ರಾಜರುಗಳು ಧರ್ಮಾಚರಣೆಗಳಿಗೆ ಪ್ರೋತ್ಸಾಹ ಕೊಡುತ್ತಿದ್ದುದರಿಂದ ಧರ್ಮಕಾರ್ಯಗಳು ಹೆಚ್ಚಿಗೆ ನಡೆದು ಈಗಿನ ಕಾಲಕ್ಕಿಂತ ಹೆಚ್ಚಿನ ಸುಖ ಪಡುತ್ತಿದ್ದೆವೆಂಬುದು ಎಲ್ಲರಿಗೂ ವಿದಿತವಾದ ವಿಷಯವೇ ಆಗಿದೆ, ಆಧುನಿಕರು ಸನಾತನ ಧರ್ಮಗಳನ್ನು ಮರೆತು ಸ್ವೇಚ್ಛಾಚಾರಿಗಳಾದ್ದರಿಂದ ದಿನದಿನಕ್ಕೆ ಹೆಚ್ಚು ಹೆಚ್ಚಿಗೆ ದುಃಖಕ್ಕೆ ಗುರಿಯಾಗುತ್ತಿರುವುದನ್ನು ಸಹ ಕಾಣುತ್ತಿದ್ದೇವೆ.

ಮೋಸಗಾರರು ಮಕ್ಕಳಿಗೆ ತಿಂಡಿಯ ಆಸೆ ತೋರಿಸಿ ಅವರುಗಳ ಆಭರಣಗಳನ್ನು ಅಪಹಾರ ಮಾಡುವಂತೆಯೂ, ನೀಚರು ಹೆಣ್ಣು ಮಕ್ಕಳಿಗೆ ಒಡವೆ ವಸ್ತ್ರಗಳ ಆಸೆಯನ್ನು ತೋರಿಸಿ ಅವರ ಪಾತಿವ್ರತ್ಯ ಹಾಳುಮಾಡುವಂತೆಯೂ, ನಮಗೆಲ್ಲಾ ದೇಶದ ಸ್ವಾತಂತ್ರ್ಯದ ಆಸೆ ತೋರಿಸಿ ಧರ್ಮವನ್ನು ಹಾಳಾಗುವಂತೆ ಮಾಡುವವರ ನಡವಳಿಕೆಯು ಅವರನ್ನೇ ಹೋಲುವುದಷ್ಟೇ. ಹಿಂದಿನ ಕಾಲದಲ್ಲಿ ಕೆಟ್ಟ ಕೆಲಸ (ಲಂಚ ತೆಗೆದುಕೊಳ್ಳುವುದು, ಜಾರತನ, ಚೋರತನ, ಕುಡಿತ, ಪ್ರಾಣಿ ಹಿಂಸಾ ಇದೇ ಮೊದಲಾದ)ವನ್ನು ರಾಜರಿಗೆ ಹೆದರಿ ಗುಟ್ಟಿನಲ್ಲಿ ಮಾಡುತ್ತಿದ್ದರು. ಈಗ ರಾಜರು ಇಲ್ಲದಂತಾಗಿ ಪ್ರಜಾಧ್ಯಕ್ಷರು ದೃಷ್ಟಿಕೊಡದೇ ಇರುವುದರಿಂದ ಅಂತಹ ದುಷ್ಟರಿಗೆ ಸ್ವಾತಂತ್ರ್ಯ ದೊರಕಿರುವುದು ನಿಜ. ಆದರೆ, ಹಿಂದೆ ಧರ್ಮಕಾರ್ಯವನ್ನು ಪ್ರಸಿದ್ಧವಾಗಿ ಆಚರಿಸುತ್ತಿದ್ದ ಸಜ್ಜನರಿಗೆ ಮಾತ್ರ ಸ್ವಾತಂತ್ರ್ಯಕ್ಕೆ ಬದಲಾಗಿ ಗುಲಾಮಗಿರಿ ಬಂದಿದೆ ಎಂದರೆ ತಪ್ಪಾಗಲಾರದು. ನಾವು "ಭಾರತಮಾತೆಗೆ ಜೈ" ಎಂಬುದಾಗಿ ಕೂಗುತ್ತಿದ್ದ ಮಾತ್ರಕ್ಕೆ ಭಾರತಮಾತೆಗೆ ಸಂತೋಷವಾಗಲಾರದು. ಅವಳು ನಮ್ಮ ಮೇಲೆ ಕೋಪ ಮಾಡುವುದಕ್ಕೆ ಅವಕಾಶ ಉಂಟು. ಅದು ಏಕೆಂದರೆ, ನೀವು ಭಾರತ ಮಾತೆಯಾದ ನನ್ನನ್ನು ಮಾತ್ರ ಹೊಗಳುತ್ತಿದ್ದೀರಿ, ನಾನೇನು ವಿಧವಾ ಸ್ತ್ರೀಯೇ? ನನ್ನ ಪತಿಯಾದ, ಸರ್ವಸ್ವಾಮಿಯಾದ, ಜಗತ್ಪಿತನಾದ ಶ್ರೀಹರಿಯ ಕಡೆ ದೃಷ್ಟಿಯೇ ಕೊಡುತ್ತಿಲ್ಲವಲ್ಲ? ನಿಮಗೆ ಏಕೆ ದವಸ ಧಾನ್ಯಗಳನ್ನು ಕೊಡಬೇಕು ಎಂಬುದಾಗಿ ಆಕ್ಷೇಪಿಸಿ ಅವುಗಳನ್ನು ಕೊಡದೆ ಇರುವುದಕ್ಕೂ ಅವಕಾಶ ಉಂಟು. ಗೀತೆಯನ್ನು ಕೈಯಲ್ಲಿ ಹಿಡಿದ ಮಾತ್ರಕ್ಕೆ ಅದರಂತೆಯೇ ನಡೆಯುತ್ತಾರೆ ಎಂಬ ಭ್ರಾಂತಿಯನ್ನು ಬಿಟ್ಟುಬಿಡಿ. ಗೀತೆಗೆ ವಿರುದ್ಧವಾಗಿಯೇ ನಡೆಯುತ್ತಿರುವುದೇ ಕಂಡು ಬರುತ್ತಿದೆ. ಗೀತೆಯಲ್ಲೂ, ದೇವರ ಆಜ್ಞಾರೂಪವಾದ ವೇದಾದಿಗಳಲ್ಲೂ ಹೇಳಿರುವ ಸನಾತನ ಧರ್ಮಗಳನ್ನು ಅನುಷ್ಠಾನಮಾಡುವುದರಲ್ಲಿ ಪ್ರಾಯಃ ಯಾರೂ ದೃಷ್ಟಿ ಕೊಟ್ಟಿಲ್ಲಾ. ಕೆಲವರು ಗೀತೆಯಲ್ಲಿ ಉಕ್ತವಾದಂತೆ ಕರ್ಮ ಮಾಡುತ್ತಿದ್ದೇವೆ ಎಂದು ಹೇಳಿಕೊಳ್ಳುತ್ತಾ ಆ ಧರ್ಮಗಳ ಸರಿಯಾದ ತಿಳುವಳಿಕೆಯಿಲ್ಲದೆ ವಿರುದ್ಧವಾದ ಆಚರಣೆಯು ಕಂಡು ಬರುತ್ತಿದೆ. ಇಂತಹ ಕೆಲವು ಸಮಸ್ಯೆಗಳನ್ನು ಪರಿಹರಿಸಲು ನಾವು ಹೊರಟಿದ್ದೇವೆ.

## ದೇವರು ಮೋಕ್ಷ ನೀಡುವಾಗ ಪಕ್ಷಪಾತಿಯೇ?

ಕೃಷ್ಣನು ಪ್ರಧಾನವಾಗಿ ನಾಲ್ಕು ಮಾನವರಲ್ಲಿ ಜಾತಿಯನ್ನು ಅವರವರಿಗೆ ಯೋಗ್ಯವಾದ ಕಾರ್ಯಗಳನ್ನು ಸೃಷ್ಟಿ ಮಾಡಿರುವೆನೆಂದು ಹೇಳಿದ್ದಾನೆ. ಈ ಮಾತು ಕೆಲವರಿಗೆ ಸಹನೆಗೆ ಬರಲಾರದು. ಅದು ಅವರ ಅವಿವೇಕತನವನ್ನೇ ಹೊರಪಡಿಸುತ್ತದೆ. ಹಾಗೇ ಮಾಡಿದರೇ ದೇವರಿಗೆ ಪಕ್ಷಪಾತ ಬರುತ್ತದೆಂದು ಅವರ ಭಾವನೆ. ಅದು ಸರಿಯಾಲ್ಲಾ, ದೇವರು ಯಾವುದೋ ಒಂದು ಜಾತಿಯವರಿಗೆ ಮಾತ್ರ ಮೋಕ್ಷ ಕೊಡುತ್ತೇನೆಂದೂ, ಇತರರಿಗೆ ಇಲ್ಲಾ ಎಂದು ಹೇಳಿದ್ದಾಲ್ಲಿ ಪಕ್ಷಪಾತ ಬರುತ್ತಿತ್ತು. ಅವನು ಎಲ್ಲಾ ಜಾತಿಯವರು ಸ್ವಧರ್ಮಾಚರಣೆಯಲ್ಲಿರುವಾಗ ಅವರೆಲ್ಲರಿಗೂ ಮೋಕ್ಷ ಕೊಡುತ್ತೇನೆಂದು ಹೇಳಿರುವಾಗ ಪಕ್ಷಪಾತವೆಲ್ಲಿಂದ ಬರಬೇಕು. ಒಂದು ಜಾತಿಯವರಲ್ಲಿ ಯೋಗ್ಯತೆಯನ್ನು ಲೆಕ್ಕಿಸದೆ ಅವರ ತಪ್ಪುಗಳನ್ನು ಗಣನೆಗೆ ತರದೆ ಅವರನ್ನು ಪ್ರೋತ್ಸಾಹಿಸುತ್ತಾ ಇರುವವರಿಗೆ, ಪಕ್ಷಪಾತ ದೋಷವನ್ನು "ಜಾತಿ ಇಲ್ಲ" ಎಂಬ ಮಾತು ಅಳಿಸಬಲ್ಲದೇ? ಇದರಂತೆ ಜಾತಿಯಲ್ಲಿ ನೀಚ ಉಚ್ಚ ಭಾವ ಹೇಳುವುದು ಜನರ ಅಸಮಾಧಾನಕ್ಕೆ ಕಾರಣವೆಂದು ಹೇಳುವುದು ಸರಿಯಲ್ಲಾ. ಜಾತಿ ಎಂದರೆ ಅದು ಏನೋ ಒಂದು ದೊಡ್ಡ ಅಸಮಾಧಾನಕ್ಕೆ ಕಾರಣವಾದ ಭಾವನೆ ಎಂದು ತಿಳಿಯಬಾರದು, ಜಾತಿ ಎಂಬುದು ಒಂದು ಸ್ಥಾನದ ಹೆಸರೆಂದು ತಿಳಿಯಬೇಕು. ಹೇಗೆ ಲೌಕಿಕ ಸರ್ಕಾರದಲ್ಲಿ ನೀಚೋಚ್ಚ ಬಾವದಿಂದ ಕೂಡಿರುವ ಅನೇಕ ಸ್ಥಾನಗಳು, ಅದಕ್ಕೆ ತಕ್ಕಂತೆ ಕರ್ತವ್ಯ, ಮರ್ಯಾದೆ, ವೇತನ, ಇವುಗಳು ಇರುವಂತೆ, ದೇವರನ್ನು ಹೊಂದಲು ಉಪಾಯವನ್ನು ತಿಳಿಸಿಕೊಡುವ ಮಾರ್ಗದಲ್ಲೂ ನಾನಾ ಸ್ಥಾನ (ಜಾತಿ) ಕರ್ತವ್ಯ, ಮರ್ಯಾದೆ, ವೇತನಕ್ಕೆ ಸದೃಶವಾದ ಅವನ ಅನುಗ್ರಹ, ಇವುಗಳು ಇವೆ ಎಂದರೆ ಏನು ತಪ್ಪಾಗುತ್ತದೆ? ಹಾಗೂ ಈ ಮಾರ್ಗ ವೈಷಮ್ಯಕ್ಕೆ ಕಾರಣವಾದದ್ದು ಎಂದು ಹೇಳುವವರು ತಮ್ಮ ಸರ್ಕಾರದಲ್ಲಿನ ಭಿನ್ನ ಭಿನ್ನ ಸ್ಥಾನಾದಿಗಳನ್ನು ತೆಗೆಯಬೇಕಷ್ಟೇ. ಎಲ್ಲರೂ ಸಮಾನರೆಂದು ಭಾವಿಸಿದರೆ ಸುಖವಾಗುವುದೆಂಬುವರು ವಿಧಾನಸಭೆಯ ಸದಸ್ಯರುಗಳ (ಎಂ.ಎಲ್.ಎ, ಮತ್ತು ಎಂಪಿಗಳು) ಕಡೆ ದೃಷ್ಟಿ ಕೊಟ್ಟರೆ ಸರಿಯಾಗಿ ತಿಳಿಯುತ್ತದೆ. ನೀಚೋಚ್ಚಭಾವ ದು:ಖಕ್ಕೆ ಕಾರಣವೆಂಬುವವರು ತಮ್ಮ ಕೈ ಬೆರಳುಗಳಿಂದಲೇ ಬುದ್ಧಿ ಕಲಿತುಕೊಳ್ಳಬಹುದು.

ಸನಾತನ ಧರ್ಮಗಳಲ್ಲಿ ಒಂದಾದ ಪರೋಪಕಾರ ಮಾಡಬೇಕೆಂಬುವರು ದೇವರು ತಮಗೆ ಯಾರನ್ನು ಒದಗಿಸಿಕೊಟ್ಟಿದ್ದಾನೆಯೋ, ಅವರಿಗೆ ಮೊದಲು ಅನುಕೂಲಗಳನ್ನು ಕಲ್ಪಿಸಿಕೊಟ್ಟ ನಂತರ, ಹೊರಗಿನವರ ಕಡೆ ದೃಷ್ಟಿ ಕೊಡಬೇಕೇ ವಿನಹ, ತಮ್ಮವರಿಗೆ ತೊಂದರೆ ಮಾಡಿ ಇತರರಿಗೆ ಅನುಕೂಲ ಮಾಡುವುದು ದೇವರಿಗೆ ಪ್ರೀತಿಕರವಾಗುವ ಧರ್ಮದ ಕೆಲಸವಲ್ಲಾ. ಹಾಗೆ ಮಾಡುವವರು "ಮನೆಗೆ ಮಾರಿ ಪರರಿಗೆ ಉಪಕಾರಿ" ಎನಿಸುವರು.

ಧರ್ಮಗಳ ಮಧ್ಯದಲ್ಲಿ ಒಂದಾದ ಅಹಿಂಸಾಚರಣೆಯನ್ನು ಮಾಡಲು ಬಯಸುವವರು ಅದಷ್ಟೇ ತಿಳಿದರೆ, ಅದು ಸರಿಯಾದ ಧರ್ಮಾಚರಣೆಯಾಗಲಾರದು, ಅಹಿಂಸೆ ವಿಷಯದಲ್ಲಿ " **every rule has an exception"** ಎಂಬಂತೆ, ಇರುವ ಅಪವಾದವನ್ನು ( exception) ಅವಶ್ಯಕವಾಗಿ ತಿಳಿಯಲೇಬೇಕು. ಇಲ್ಲವಾದರೆ " **Half knowledge is always Dangerous"** ಎಂಬಂತೆ ಅವರಿಗೂ ಮಹಾ ಜನಾಂಗಕ್ಕೂ ಅಗಾಧವಾದ ಹಿಂಸೆಗೆ ಕಾರಣವಾಗುವುದರಲ್ಲಿ ಸಂದೇಹವಿಲ್ಲಾ - ಎಲ್ಲರನ್ನೂ ಸಂತೋಷ ಪಡಿಸುವೆವು ಎಂಬುವರು **" One cannot please every body"** ಎಂಬ ಮಾತನ್ನು ಮರೆಯಬಾರದು. ಆದ್ದರಿಂದ ಸಜ್ಜನರೆಲ್ಲರನ್ನೂ ಸುಖಪಡಿಸುವೆವು ಎಂಬ ಭಾವನೆ ಮಾತ್ರ ಇರಬೇಕು. ಸಜ್ಜನರು ಯಾರೆಂದರೆ, ದೇವರ ಭಕ್ತರಾಗಿ ಮತ್ತೊಬ್ಬರು ತಮಗೆ ಮಾಡಿದ ಉಪಕಾರವನ್ನು ಸ್ಮರಿಸುತ್ತಾ (ಕೃತಜ್ಞತಾ ಉಳ್ಳವರಾಗಿ) ಮತ್ತೊಬ್ಬರಿಗೆ ಹಿಂಸೆ ಕೊಡದೆ ತಮ್ಮ ಕೈಲಾದಷ್ಟು ಪರೋಪಕಾರ ಮಾಡುವ ಸ್ವಭಾವವುಳ್ಳವರೆಂದು ತಿಳಿಯಬೇಕು. ಇದಕ್ಕೆ ವಿರುದ್ಧವಾಗಿ, ಗುಣ ಬುದ್ಧಿ ಯನ್ನು ಕೊಡುವ ದೇವರಲ್ಲಿ ಭಕ್ತಿಯಿಲ್ಲದವರಾಗಿ " ತಿಂದ ಮನೆಗೆ ಎರಡು ಬಗೆಯುವ ಕೃತಘ್ನತಾ" ಬುದ್ಧಿಯುಳ್ಳವರಾಗಿ ಪರೋಪಕಾರದಲ್ಲಿ ಸ್ವಲ್ಪವೂ ದೃಷ್ಟಿ ಇಲ್ಲದೇ ಜಾತಿ ದ್ವೇಷ, ವ್ಯಕ್ತಿ ದ್ವೇಷ. ದೇಶದ್ವೇಶ ಇವುಗಳನ್ನು ಇಟ್ಟುಕೊಂಡು ಪರರಿಗೆ ಹಿಂಸೆ ಕೊಡುವವರೇ ದುರ್ಜನರೆಂದು ಭಾವಿಸಬೇಕು. ದುರ್ಜನನಾದ ಒಬ್ಬನಿಗೆ ಅನುಕೂಲ ಮಾಡುವುದೆಂದರೆ ನೂರಾರು ಸಜ್ಜನರಿಗೆ ದು:ಖ ಕೊಡುವುದಕ್ಕೆ ಸಮಾನ ಎಂದು ಭಾವಿಸಬೇಕು. ಒಂದು ಹಾವಿಗೆ ಹಾಲೆರೆದು ಪೋಷಣೆ ಮಾಡಿದರೆ ಅದು ನೂರಾರು ಮಂದಿಗೆ ಕಚ್ಚಿ ಹಿಂಸಿ ಕೊಡುವುದಷ್ಟೆ. ಕೆಟ್ಟವರು ಎಂಬುವರನ್ನು ಸರಿಯಾಗಿ

ನೋಡಿಕೊಂಡರೆ ಅವರೂ ಒಳ್ಳೆಯವರೇ ಆಗುವರು ಎಂಬ ಭಾವನೆಯುಳ್ಳವರು " Nature cannot be destroyed" ಎಂಬುದನ್ನು ಮರೆಯಬಾರದು. ನಾವು ಬೇವಿನ ಬೀಜಕ್ಕೆ ಸಕ್ಕರೆ ಪಾತಿ ಮಾಡಿ ಹಾಲು ಹಾಕಿದರೂ ಅದು ಸಿಹಿ ಫಲ ಕೊಡಲಾರದೆಂಬುದನ್ನೂ, ಹಾವಿಗೆ ಎಷ್ಟು ಹಾಲೆರೆದರೂ ಅದು ಕಚ್ಚುವ ಸ್ವಭಾವ ಬಿಡುವುದಿಲ್ಲ ಎಂಬುದನ್ನೂ ಸಹ ಮರೆಯಬಾರದು. ಹಾಗೂ ಕೆಲವರು ದುಷ್ಟರಿಗೆ ಶಿಕ್ಷೆ ಕೊಡಬಾರದೆಂಬ ಅಹಿಂಸಾ ಧರ್ಮಬುದ್ಧಿಯುಳ್ಳವರಿಗೆ ಪೋಲೀಸ್ ಡಿಪಾರ್ಟ್ಮೆಂಟಿನಿಂದ ಮತ್ತು ಮಿಲಿಟರಿಯಿಂದಲೂ ಆಗುವ ಪ್ರಯೋಜನವೇನಿದೆ? ಅವರಿಗೆ ಸುಮ್ಮನೆ ಸಂಬಳ ಕೊಡುವುದಕ್ಕಿಂತ ಸರ್ಕಾರವೇ ಆ ದ್ರವ್ಯ ಉಳಿಸಿಕೊಳ್ಳುವುದೇ ಮಿಗಿಲಾದ ಕೆಲಸವಲ್ಲವೇ?

ದೇವರಲ್ಲಿ ಭಕ್ತಿ ಮಾಡಬೇಕೆಂಬುವರು ಮುಖ್ಯವಾಗಿ ಗಮನಿಸಬೇಕಾದ ಒಂದು ಅಂಶವೇನೆಂದರೆ, ಕ್ರೈಸ್ತ ಮತ್ತು ಮಹಮ್ಮದನನ್ನು ದೇವರ ದೂತರೆಂದು ನಂಬಿ ಅವರನ್ನು ಅನುಸರಿಸುತ್ತಿರುವವರು ಅವರವರ ಗುರುಗಳ ವಿಷಯದಲ್ಲಿ ಸ್ವಲ್ಪ ಅವಮಾನಕರವಾದ ಮಾತನ್ನು ಯಾರು ಆಡಿದರೂ ಅವರನ್ನು ಕೊಲ್ಲದೇ ಬಿಡಲಾರರು, ಹೀಗಿರುವಾಗ ದೇವರ ವಿಶೇಷ ಭಕ್ತರೆಂಬ ಅಭಿಮಾನವುಳ್ಳ ನಾವು, ದೇವರ ಸನ್ನಿಧಾನದಿಂದ ಕೊಟ್ಟಿರುವ ಪ್ರತಿಮಾ, ಪಶು, ಪಕ್ಷಿ, ಭಕ್ತರಾದ ಮಾನವರು, ಇವನ್ನು ನಾಶ ಮಾಡುವುದಕ್ಕೆ ಹೊರಟಿರುವವರಿಗೆ ಶಿಕ್ಷೆ ಕೊಡದೆ, ಅವರ ಕಾರ್ಯವನ್ನು ಅನುಮೋದಿಸಿದರೆ ನಾವು ಹೇಗೆ ದೇವರ ಭಕ್ತರಾಗುವೆವು? ಮತ್ತು ಅಂತಹ ನೀಚರಿಗೆ ಉತ್ತಮ ಸ್ಥಾನ ಕೊಡುವುದು ಯಾವ ವಿವೇಕದ ಕೆಲಸ. ಇವೆಲ್ಲಾ ನಮ್ಮ ದೇಶಾಭಿವೃದ್ಧಿಗೆ ಹೇಗೆ ಕಾರಣವಾಗುತ್ತದೆ? ದೇವರಾದರೋ "ನನ್ನ ಭಕ್ತರು ನನಗೆ ಪ್ರಾಣದಂತೆ ಇರುವರು " ಎಂದು ಹೇಳಿ ಕೊಂಡಿರುವಾಗ, ಅವರಿಗೆ ದು:ಖ ಕೊಟ್ಟರೆ ದೇವರು ನಮ್ಮಲ್ಲಿ ಹೇಗೆ ಅನುಗ್ರಹ ಮಾಡುತ್ತಾನೆ. ದೇವರ ಅನುಗ್ರಹವಿಲ್ಲದೆ ನಮಗೆ ಇಷ್ಟವಾದ ಈ ಲೋಕ ಮತ್ತು ಪರಲೋಕದ ಸುಖಗಳು ಹೇಗೆ ದೊರಕುತ್ತವೆ? ಆದ್ದರಿಂದ ದೇವರ ಅನುಗ್ರಹ ಬಯಸುವವರು ದೇವರ ಭಕ್ತರನ್ನೇ ಪ್ರಜಾಧ್ಯಕ್ಷಾದಿ ಸ್ಥಾನಗಳಿಗೆ ಚುನಾಯಿಸಿದರೆ ಹಿಂದುಗಳಾದ ನಮಗೆ ಅನುಕೂಲ ಆಗುವುದೆಂಬುದೇ ನಮ್ಮ ಭಾವನೆ.

ಕೃಷ್ಣನು ಭಗವದ್ಗೀತೆಯಲ್ಲಿ ಜಾತಿ ಸಾಂಕರ್ಯವನ್ನು ಉಂಟು ಮಾಡುವವರು ಜನರನ್ನು ಕೊಂದವರೆಂದು ಹೇಳಿರುವಾಗ, ಅಂತಹ ಜಾತ್ಯಾತೀತತರನ್ನು ಪ್ರಜಾಧ್ಯಕ್ಷರನ್ನಾಗಿಯೋ, ಗುರುಗಳನ್ನಾಗಿಯೋ, ಮಾಡಿಕೊಂಡು ಹೋದರೆ ನೀವು ಹೇಗೆ ಬಾಳುವಿರಿ? ಪಶು-ಪಕ್ಷಿಗಳು ತಮಗಿಂತ ಭಿನ್ನ ಜಾತಿಯ ಹೆಣ್ಣು ಪಶುಪಕ್ಷಿಗಳ ಸಹವಾಸ ಮಾಡುವುದಿಲ್ಲ. ಹೀಗಿರುವಲ್ಲಿ ಅನ್ಯಜಾತಿ ಸ್ತ್ರೀ ಸಂಗವನ್ನು ಮಾಡುತ್ತಾ, ಮಾಡುವವರಿಗೆ ಪ್ರೋತ್ಸಾಹ ಕೊಡುತ್ತಿರುವ ಕೆಲವರನ್ನು ಗಮನಿಸಿದರೆ, ಪಶು-ಪಕ್ಷಿಗಳಿಗಿಂತ ಹೀನ ಗುಣದ ಮಾನವರು ಇರುವರೆಂದು ತೋರುವುದಿಲ್ಲವೆ.

"ಹಿಂದು ಮುಸಲ್ಮಾನ್ ಏಕ್ ಹೋ" ಎಂಬುದಾಗಿ ಹೇಳಿರುವವರ ಅಭಿಪ್ರಾಯ ಏನಿರಬಹುದೆಂದು ಸ್ವಲ್ಪ ಯೋಚಿಸೋಣ. "**Mountain must go to Mohammed or Mohammed must go to Mountain"** ಎಂದು ಹೇಳಿದ ಮಾತ್ರಕ್ಕೆ ಬೆಟ್ಟ ಎಂದಾದರೂ ಮೊಹಮ್ಮದ್ ಇರುವಲ್ಲಿಗೆ ಹೋಗಬಲ್ಲದೇ? ಆದ್ದರಿಂದ ಮಹಮ್ಮದ್ ತಾನೇ ಬೆಟ್ಟ ಇದ್ದಲ್ಲಿಗೆ ಹೋಗಬೇಕಷ್ಟೆ. ಹಾಗೆಯೇ ಮುಸಲ್ಮಾನರು ಎಂದಾದರೂ ಹಿಂದುಗಳಾಗಲು ಬಯಸುವರೇ? ಅರ್ಥಾತ್ ಹಿಂದುಗಳೇ ಮುಸಲ್ಮಾನರಾಗಬೇಕೆಂಬ ಭಾವನೆ ಮೇಲ್ಕಂಡ ದೊರೆಯುವುದಲ್ಲದೇ? ಇದು ನಮ್ಮ ಪೊಳ್ಳು ಊಹೆ ಮತ್ತು ಮನೋಭಾವನೆ ಎಂಬುದಾಗಿ ತಿಳಿಯಬಾರದು. ಕ್ರೈಸ್ತರು, ಮುಸಲ್ಮಾನರು, ತಮ್ಮ ಗುರುಗಳ ಮಾತಿಗೆ ವಿರುದ್ಧವಾದುದೆಂದು ಸಂತಾನ ನಿಯಂತ್ರಣ ಜಾರಿಗೆ ತರದೆ ಇರುವಾಗ ಹಿಂದುಗಳಾದ ನಾವು ದೇವರ ಆಜ್ಞಾರೂಪವಾದ ವೇದಾದಿಗಳಲ್ಲಿ ಹೇಳಿರುವ ಪ್ರಜಾಭಿವೃದ್ಧಿ ಕಡೆಗೆ ದೃಷ್ಟಿ ಕೊಡದೇ ಅವುಗಳನ್ನೂ ಮೀರಿ ಸಂತಾನಕ್ಕೆ ಅಡ್ಡಿ ಮಾಡಿಕೊಂಡರೆ ನಾವು ದೇವರ ಭಕ್ತರೋ? ಅಥವಾ ದ್ರೋಹಿಗಳೋ? ಎಂಬುದನ್ನು ಯೋಚಿಸಬೇಕಾಗಿದೆ. ದೇವರು ತನ್ನ ದ್ರೋಹಿಗಳನ್ನು ಏಕೆ ತಾನೆ ಕಾಪಾಡುತ್ತಾನೆ? ಮುಂದಿನ ಪುಣ್ಯ ಪಾಪ ಹೇಗಾದರೂ, ಇರಲಿ, ಲೌಕಿಕ ದೃಷ್ಟಿಯಿಂದ ನೋಡಿದಾಗ "**Think of the Conseuences"** ಎಂದಂತೆ ಇತರರ ಸಂಖ್ಯಾ ಹೆಚ್ಚಿದ ನಂತರ ಹಿಂದುಗಳ ಗೂಢ ದ್ವೇಷಿಗಳಾದವರು, ಯಾವ ರಾಜ್ಯದಲ್ಲಿ ಯಾರ ಸಂಖ್ಯಾ ಜಾಸ್ತಿ ಇದೆಯೋ, ಆ ರಾಜ್ಯ ಅವರದೇ. ಎಂಬ ನ್ಯಾಯವನ್ನು ಉಪಾಯವಾಗಿ **without sword** ಜಾರಿಗೆ ತಂದರೆ ನಿರುತ್ತರರಾದ ನಮ್ಮ

ತಲೆಯ ಮೇಲೆ ಕಲ್ಲು ಎಳೆದಂತೆ ಆಗುವುದಿಲ್ಲವೇ? ಈ ಮುಂದಿನ ಯೋಚನೆಯನ್ನು ಹಿಂದುಗಳು ಏಕೆ ಮಾಡಿಲ್ಲ? ಎಂಬುದು ನಮಗೆ ಒಂದು ಆಶ್ಚರ್ಯಕರವಾದ ಸಂಗತಿಯಾಗಿದೆ.

ಅಲ್ಪಸಂಖ್ಯಾತರಿಗೆ ಪ್ರೋತ್ಸಾಹ ಕೊಡುತ್ತಾ ಅವರು ಮಾಡಿದ ತಪ್ಪುಗಳನ್ನು ಕ್ಷಮಿಸಬೇಕೆಂಬುವರು ತಮ್ಮ ಮನಸ್ಸಿನಲ್ಲಿ ಇಟ್ಟುಕೊಂಡಿರುವ ದೇವ ದ್ರೋಹಿಗಳ ಕಡೆ ಇರುವ ದೃಷ್ಟಿಯನ್ನು ಬದಲಾಯಿಸಿ, ದೇವರ ಭಕ್ತರಾದ, ನಮಗೆ ಸಹೋದರರಾದ, ಧರ್ಮಕ್ಕಾಗಿ ಹೋರಾಡಿ ಪ್ರಾಣ ಕೊಡುವ ಕ್ಷತ್ರಿಯ ಎನಿಸುವ ಅತ್ಯಲ್ಪ ಸಂಖ್ಯಾತರಾದ ಮರಾಠಿ ಜನಾಂಗದ ಕಡೆಗೆ ದೃಷ್ಟಿಕೊಟ್ಟು ಅವರನ್ನು ಅಭಿವೃದ್ಧಿಗೆ ತರುವ ಕಾರ್ಯ ಕೈಗೊಂಡರೇ ದೇವ್ರು ಪ್ರೀತನಾಗಿ ನಮ್ಮಲ್ಲಿ ದಯಾ ತೋರಿಸುವನಷ್ಟೆ.

ಹೊರಗಿನ ಕಳ್ಳರಿಗಿಂತ ಮನೆಗಳ್ಳರು ಹೆಚ್ಚಗೆ ಅಪಾಯಕಾರಿಯಲ್ಲವೇ? ಆದ್ದರಿಂದ ಹಿಂದುಗಳಂತೆ ನಟನೆ ಮಾಡುತ್ತಾ, ಹಿಂದುಗಳ ದ್ವೇಷಿಗಳ ಪ್ರೋತ್ಸಾಹವನ್ನು ಕೊಡುತ್ತಾ, ಸನಾತನ ಧರ್ಮಕ್ಕೆ ಚ್ಯುತಿ ತರುತ್ತಿರುವ, ದೇವರ ಭಕ್ತರ ಮೇಲೆ ಸೈನ್ಯದ ದಾಳಿ ನಡೆಸುವ ಪರಮ ನೀಚರಾದ ಮೋಸಗಾರರಿಗೆ ಉತ್ತಮ ಸ್ಥಾನ ಕೊಡದೇ ದೇವರ ಭಕ್ತರನ್ನೇ ಉತ್ತಮ ಸ್ಥಾನಗಳಿಗೆ ಚುನಾಯಿಸಿದರೆ ನಾವು ಕ್ಷೇಮ ಹೊಂದುವೆವು. ಇಲ್ಲವಾದರೆ ಸ್ವಲ್ಪ ಕಾಲದಲ್ಲೇ ಹಿಂದುಗಳ ಮಾನಪ್ರಾಣಗಳ ಹಾನಿಯಾಗುವ ಯೋಗ ಬಂದಾಗ ನಮ್ಮ ಹಿತಚಿಂತನೆಯನ್ನು ಜ್ಞಾಪಿಸಿಕೊಳ್ಳಬೇಕಾಗಿ ಬರುತ್ತದೆ. ರಾಮ ದೇವರ ಸೇವೆಗಾಗಿ ಪ್ರಾಣಕೊಟ್ಟ ಜನಾಂಗಕ್ಕೂ ಶಾಂತಿ ದೊರಕಲಿ, ಮುಂದೆ ರಾಮದೇವರ ಸೇವಾ ಮಾಡುವವರಿಗೆ ಜಯವಾಗಲಿ, ರಾಮ ದೇವರ, ರಾಮಭಕ್ತರ ದ್ರೋಹಿಗಳ ಜೀವನಕ್ಕೆ ಧಿಕ್ಕಾರವಿರಲಿ.

**24.1.1991** ಶ್ರೀ ದೇವೇಂದ್ರತೀರ್ಥ ಶ್ರೀಪಾದಂಗಳವರು

ಶ್ರೀ ದೇವೇಂದ್ರತೀರ್ಥರ ಮಠ, ರಾಮಾನುಜ ರಸ್ತೆ, ಮೈಸೂರು - **570004**